ಆದ್ರೂ ಈ ಹುಡುಗೀರು ಇದಾರಲ್ಲ... ಬಲು ಚಂಚಲರು! ಬೇಕಾದ ಹಾಗೆ ಮಣಿ ಮಣಿಯಾಗಿ ಮಾತಾಡ್ತಾರೆ! ಮುದ್ದು ಬೇಕಾದ್ರೂ ಮಾಡ್ತಾರೆ! ಆದ್ರೆ... ಓಡಿ ಹೋಗೋಂಥ ಮಾತು ಬಂದಾಗ ಮಾತ್ರ ಈ ಉತ್ಸಾಹ ಇರಲ್ಲ ನೋಡು ಅವರಿಗೇ!... ಅಂದ್ಹಾಗೆ ಒಂದು ಮಾತು ಐಕಿ... ನೀನೀಗ ಕೊಡೋ ಪ್ರೀತಿಮದ್ದು, ಎರಡು–ಮೂರು ಗಂಟೆ ಕಾಲ ಪರಿಣಾಮ ಬೀರಿದ್ರೂ... ಅಷ್ಟೇ ಸಾಕಪ್ಪ!'

'ಅದು ಸರೀ... ಈ ಓಡಿ ಹೋಗೋಂಥ ಮೂರ್ಖ ಕೆಲಸಾನ ಎಷ್ಟು ಹೊತ್ತಿಗೆ ಮಾಡಬೇಕೂಂತ ಇದೀರಿ?'

ದೇಶಾವರಿಯಾಗೆಂಬಂತೆ ತನಿಖೆ ಮಾಡಿದ ಐಕಿ.

'ಅದಾ? ಇವತ್ತು ರಾತ್ರಿ ಒಂಬತ್ತು ಗಂಟೆಗಪ್ಪ!' ಇದ್ದಕ್ಕಿದ್ದಂತೆ ಹುರುಪು ಬಂದುಬಿಟ್ಟಿತು ಹೊಸ ಮದುವಣಿಗನಿಗೆ ಖುಶಿಯಿಂದ ಕಣ್ಣು–ಹುಬ್ಬು ಹಾರಿಸುತ್ತಾ, ಹುಮ್ಮಸ್ಸಿನಿಂದ ವಿವರಿಸತೊಡಗಿದ ಅವ.

'ರಾತ್ರಿ ನಾವೆಲ್ಲ ಊಟ ಮಾಡೋದು ಎಂಟು ಗಂಟೆಗೆ. ಎಂಟೂವರೆಗೆ ತಲೆನೋವಿನ ನೆಪ ಹೇಳಿ ರೋಸಿ ತನ್ನ ಕೋಣೆಗೆ ಹೊರಟುಹೋಗ್ತಾಳೆ. ನಾನು ಒಂಬತ್ತು ಗಂಟೆಗೆ ಸರಿಯಾಗಿ, ಹಿತ್ತಲಿಂದ ಹಾದು ಅವಳ ರೂಮಿನ ಬಳಿ ಹೋಗ್ತೀನಿ. ಅವಳು ಕಿಟಕಿಯಿಂದ ಹೊರ ಬೀಳಲು ಸಹಾಯ ಮಾಡ್ತೀನಿ. ಇಬ್ಬರೂ ಅಲ್ಲಿಂದ ಪಾರಾಗಿ ಓಡಿಬಿಡ್ತೇವೆ. ಆ ಮೇಲೆ ಕರಾರುವಕ್ಕಾಗಿ ಒಂಬತ್ತೂವರೆಗೆ ನನ್ನ ಮನೇಲಿ ಪುರೋಹಿತ ಮಂತ್ರ ಹೇಳ್ತಾನೆ. ನಾನು, ರೋಸಿ ಹಾರ ಬದಲಾಯಿಸಿಕೊಳ್ತೀವಿ. ಮುಗೀತಲ್ಲ ಮದುವೆ?

ಏನೋಪ್ಪ! ಆ ದೇವರ ದಯೆಯಿಂದ ಇವೆಲ್ಲ ನಾನಂದುಕೊಂಡ ಹಾಗೇ ನಡೆದುಬಿಟ್ರೆ... ನಾನು ಗೆದ್ದೆ! ಹೇಳಪ್ಪಾ ಐಕೀ... ಇಂಥ ಪ್ರೀತಿ ಔಷಧಿ ನಿನ್ನ ಹತ್ರ ಇದೆಯಾ...? ಕೊಡ್ತೀಯಾ?'

ತನ್ನ ಮೊಂಡು ಮೂಗನ್ನು ಗಹನವಾಗಿ ಉಜ್ಜಿಕೊಂಡ ಐಕಿ. ಆ ಮೇಲೆ ಮೇಧಾವಿಯ ಹಾಗೆ ನಿಧಾನವಾಗಿ ಹೇಳಿದ.

'ನೋಡಪ್ಪ ಚಂಕ್, ಇಂಥ ಮುದ್ದುಗಳನ್ನೆಲ್ಲ ಬಹಳ ಜಾಗರೂಪವಾಗಿ ಉಪಯೋಗಿಸಬೇಕು. ಯಾಕಂದ್ರೆ... ನಾಳೆ ದಿನ ನಮಗೂ ಯಾವ ಕೆಟ್ಟ ಹೆಸರೂ ಬರಬಾರದು ನೋಡು? ನೀನು ನನ್ನ ಪರಮಾಪ್ತ ಆದ್ದರಿಂದ, ನಿಂಗೆ ನಾನು ಕೊಡ್ತಿದೀನಿ ಅಷ್ಟೇ... ನೋಡ್ತಾ ಇರು, ಈ ಔಷಧಿ ಎಂಥೆಂಥ ಪರಿಣಾಮ ಬೀರುತ್ತೆ ಅಂತ! ಆ ರೋಸಿ ಇನ್ಮುಂದೆ ನಿನ್ನ ವಿಷಯವಾಗಿ ಹೇಗೆಲ್ಲ ನಡಕೊಳ್ತಾಳೆ ಅನ್ನೋದು ನಿಂಗೇ ಗೊತ್ತಾಗುತ್ತೆ!'

ಇಷ್ಟು ಹೇಳಿ ಐಕಿ ತನ್ನ ಮೇಜಿನ ಹಿಂದೆ ಹೋದ. ಔಷಧದ ಗೂಡಿನಲ್ಲಿದ್ದ ಡಬ್ಬಿಯಿಂದ ಎರಡು ನಿದ್ದೆ ಮಾತ್ರ ತೆಗೆದ. ಅದಕ್ಕೆ ಒಂದಿಷ್ಟು ತೀಕ್ಷ್ಣ ಅಫೀಮನ್ನು ಬೆರೆಸಿದ. ಇದೆಲ್ಲವನ್ನೂ ಚೆನ್ನಾಗಿ ಕುಟ್ಟಿ ಪುಡಿ ಮಾಡಿ, ಗಾತ್ರ ಹೆಚ್ಚಿಸಲು ಸ್ವಲ್ಪ ಸಕ್ಕರೆ ಪುಡಿಯನ್ನೂ ಆ ಮಿಶ್ರಣಕ್ಕೆ ಸೇರಿಸಿದ. ಹೀಗೆ ತಯಾರಾದ ಮದ್ದಿನ ಪುಡಿಯನ್ನು ಅಚ್ಚುಕಟ್ಟಾಗಿ ಒಂದು ಬಿಳಿಯ ಹಾಳೆಯಲ್ಲಿಟ್ಟು, ಚೊಕ್ಕವಾಗಿ ಮಡಿಸಿ ಚಂಕ್‌ಗೆ ಕೊಟ್ಟ. ಯಾವುದಾದರೂ ದ್ರವದಲ್ಲಿ ಬೆರೆಸಿ ಇದನ್ನು ಕುಡಿಸಬೇಕೆಂದೂ, ಆಗ ಪರಿಣಾಮ ಇನ್ನೂ ಹೆಚ್ಚೆಂದೂ ಸೂಚನೆ ನೀಡಿದ.

ಚಂಕ್‌ಗೆ ಆನಂದವೋ ಆನಂದ. ಗೆಳೆಯನನ್ನು ಅಪ್ಪಿಕೊಂಡಾಡಿದ. ಪದೇ ಪದೇ ಧನ್ಯವಾದ ಹೇಳಿ, ಕುಣಿತದ ನಡಿಗೆಯಲ್ಲಿ ಉಲ್ಲಸಿತನಾಗಿ ಹೊರಟು ಹೋದ.

ಚಂಕ್ ಹೊರಟುಹೋದ ಮೇಲೆ, ಇತ್ತ ಐಕಿ ನಂಬಿಗಸ್ಥ ಆಳೊಬ್ಬನನ್ನು ಕರೆದು, ಅವನ ಮುಖಾಂತರ ಚಂಕ್–ರೋಸಿಯರ ಅಂದಿನ ರಾತ್ರಿಯ ಸಮಸ್ತ ಯೋಜನೆಗಳನ್ನು ಸವಿವಿವರವಾಗಿ ಮಿ. ರಿಡಲ್‌ಗೆ ವರದಿ ಕಳಿಸಿದ.

ಆ ರಿಡಲ್ ಮಹಾಶಯ, ಠೊಣೆಯ ಮಾತ್ರವಲ್ಲ. ಶೀಘ್ರ ಕೋಪಿ! ಮೊದಲೇ ಇಟ್ಟಿಗೆಪುಡಿ ಬಣ್ಣದ ಬಿಡು ಅವನ ಮುಖ, ಸಿಟ್ಟು ಬಂದಾಗ ಇನ್ನೂ ಕೆಂಪೇರುತ್ತಿತ್ತು!

'ಬರಲಿ ಇವತ್ತು ಅವನು...' ಮಿ. ರಿಡಲ್ ಅವುಡುಗಚ್ಚಿದ– 'ರೋಸಿಯ ರೂಮಿನ ಪಕ್ಕ ತಾನೇ ನನ್ನ ರೂಮು ಇರೋದು? ರಾತ್ರಿ ಊಟ ಮುಗಿದ ಕೂಡಲೇ, ಒಂಬತ್ತಕ್ಕೆ ಸರಿಯಾಗಿ, ನಾನೇ ನನ್ನ ಕೋಣೆ ಬಾಗಿಲಲ್ಲಿ ದೊಣ್ಣೆ ಹಿಡಿದು ಕಾಯ್ತಾ ಇರ್ತೀನಿ!

ಹಿತ್ತಲ ಬಾಗಿಲಿಂದ ಬರ್ತಾನಂತೋ? ಬರಲಿ ಬರಲಿ. ಹೇಗೆ ಬೇಕಾದ್ರೂ ಬರಲಿ. ಆದರೆ ಇವತ್ತು ಅವನು ವಾಪಸು ಹೋಗೋದು ಮಾತ್ರ ಮದುವಣಿಗನ ಸಾರೋಟಿನಲ್ಲಿ ಅಲ್ಲ... ಆಸ್ಪತ್ರೆಗಾಡೀಲಿ!'

ಐಕಿ ಕಳಿಸಿದ್ದ ಆಳು ಹಿಂತಿರುಗಿಬಂದು, ರಿಡಲ್‌ನ ಆಕ್ರೋಶಗಳನ್ನು ಯಥಾವತ್ತಾಗಿ ವರದಿ ಒಪ್ಪಿಸಿದ. ಐಕಿ ಆನಂದ ತುಂದಿಲನಾದ. ಎಂತಹ ಸಿಹಿ ಸುದ್ದಿ ಇದು! ಇತ್ತ ರೋಸಿ ನಿದ್ರಾದೇವತೆಯ ತೋಳ ತೆಕ್ಕೆಯಲ್ಲಿ! ಅತ್ತ ಬಗಲಲ್ಲಿ ದೊಣ್ಣೆ ಹಿಡಿದ ಕೋಪೋನ್ಮತ್ತ ಮಿ. ರಿಡಲ್ ಬಾಗಿಲಲ್ಲಿ! ತನ್ನ ಪ್ರೇಮ ಶತ್ರುವಿನ ಕತೆ ಮುಗಿದೇ ಹೋಯ್ತೆಂದು ಐಕಿ ಹಿರಿ ಹಿರಿ ಹಿಗ್ಗಿದ. ರಾತ್ರಿಯಿಡೀ ಅವನಿಗೆ ಸಂಭ್ರಮ... ಆತಂಕ! ಯಾವ ಗಳಿಗೇಲಿ ಏನು ದುರಂತ ಸುದ್ದಿ ಬಂದೀತೋ ಅಂತ ಪುಳಕಿತನಾಗಿ ಕಾದೇ ಕಾದ. ಇಲ್ಲ. ಅಂಥ ಯಾವುದೇ ವರ್ತಮಾನ ಬರಲೇ ಇಲ್ಲ.

ಹಾಗೂ ಹೀಗೂ ಬೆಳಗಾಯಿತು. ಎಂಟು ಗಂಟೆಗೆ ಸರಿಯಾಗಿ ಬೆಳಗಿನ ಪಾಳಿಯ ಗುಮಾಸ್ತ ಅಂಗಡಿಯೊಳಗೆ ಕಾಲಿಡುತ್ತಿದ್ದಂತೆ... ಐಕಿ ಮೇಲೆದ್ದು ಧಾವಂತವಾಗಿ ತಾನೇ ಖುದ್ದಾಗಿ ಮಿ. ರಿಡಲ್‌ನ ಮನೆಯತ್ತ ಹೊರಟ. ಅವನು ರಸ್ತೆಗೆ ಬರುವುದಕ್ಕೂ, ವೇಗವಾಗಿ ಬಂದುನಿಂತ ಕಾರೊಂದರಿಂದ ಇಳಿದ ಚಂಕ್ ಓಡೋಡುತ್ತಾ ಬಂದು ಅವನಿಗೆ ದುರಾಗುವುದಕ್ಕೂ ಸರಿಯಾಯ್ತು. ಸಂತೋಷ ಕುಣಿಯುತ್ತಾ ಇತ್ತು ಹುಡುಗನ ಮುಖದಲ್ಲಿ! ಬಾಚಿ ಗೆಳೆಯನನ್ನು ತಬ್ಬಿಕೊಂಡು ಬಿಟ್ಟ.

'ಎಲ್ಲ ಶುಭ ಸಮಾಚಾರವೇ ಮಿತ್ರಾ.'

ಆನಂದದಿಂದ ಹಲ್ಲು ಕಿರಿಯುತ್ತಾ ಉಲಿದ ಚಂಕ್.

'ಅಬ್ಬ! ಪ್ರತಿಯೊಂದೂ ಖಚಿತವಾಗಿ ನಡೆದು ಹೋಯ್ತು. ಒಂಬತ್ತು ಗಂಟೆಗೆ ಇನ್ನೂ ಒಂದು ನಿಮಿಷ ಇರುವಾಗಲೇ ಮುದ್ದು ರೋಸಿ ನನ್ನ ತೋಳುಗಳಲ್ಲಿದ್ದಳು. ಆ ಮೇಲೆ, ಅಂದುಕೊಂಡಂತೆಯೇ, ಸರಿಯಾಗಿ ಒಂಬತ್ತೂವರೆಗೆ ನಾನೂ–ನನ್ನ ಹುಡುಗಿಯೂ ನಮ್ಮ ಮನೆಯಲ್ಲಿದ್ದೆವು. ನಮಗಾಗಿ ಕಾಯ್ತಾ ಇದ್ದ ಪುರೋಹಿತ ಬೇಗ ಬೇಗನೇ ಎಲ್ಲ ಶಾಸ್ತ್ರಗಳನ್ನೂ ಮುಗಿಸಿಬಿಟ್ಟ. ಆಗೇ ಹೋಯ್ತಪ್ಪ ನಮ್ಮಿಬ್ಬರ ಮದುವೆ!

ದೇವರೇ, ನಾನೆಂಥ ಅದೃಷ್ಟಶಾಲಿ! ಇವತ್ತು ಬೆಳಿಗ್ಗೆ ರೋಸಿ ನಾನವಳಿಗೆ ಕೊಟ್ಟ ಕಡುನೀಲಿ ಉಡುಪು ಧರಿಸಿದ್ದಳು. ಅವಳ ಮುದ್ದು ಹೆರಳಲ್ಲಿ ಬಣ್ಣ ಬಣ್ಣದ ಗುಲಾಬಿ! ನನಗಾಗಿ ಸಿಹಿತಿಂಡಿ ಕೂಡ ಮಾಡಿ ಕೊಟ್ಟಳು. ದೇವತೆಯ ಹಾಗೆ ಕಾಣುತ್ತಿದ್ದಳಪ್ಪ ನನ್ನ ಪ್ರಿಯತಮೆ!... ನನಗಂತು ದೇವಲೋಕದ ಹಾಗೆ ಭಾಸವಾಗ್ತಾ ಇದೆ ಈ ಜಗತ್ತು! ಮಿತ್ರಾ, ನೀನೂ ಒಂದು ದಿನ ಬಿಡುವು ಮಾಡ್ಕೊಂಡು ಖಂಡಿತ ನಮ್ಮ ಮನೆಗೆ ಊಟಕ್ಕೆ ಬರಲೇ ಬೇಕಪ್ಪ!

ಅಂದ ಹಾಗೆ, ಐಕೀ... ಇನ್ನೊಂದು ಸಿಹಿ ಸುದ್ದಿ ನಿನಗೆ! ಊರಾಚೆ ಸೇತುವೆ ಕಟ್ತಾ ಇದಾರಲ್ಲ... ಅಲ್ಲಿ ನನಗೆ ಒಂದು ಒಳ್ಳೇ ಕೆಲ್ಸ ಸಿಕ್ಕಿದೆ. ಅಲ್ಲಿಗೇ ಈಗ ನಾನು ಹೋಗ್ತಾ ಇರೋದು.

ಎಲ್ಲ ನಿನ್ನ ಕೃಪೆ ಗೆಳೆಯಾ! ಹೇಗೆ ತಾನೇ ಧನ್ಯವಾದ ಹೇಳಲಿ?'

'ಮತ್ತೆ... ಮತ್ತೆ... ನಾನು ನಿನಗೆ ಕೊಟ್ಟ ಔಷಧಿ ಪುಡಿ?'

ಬೆವರೊರೆಸಿಕೊಳ್ಳುತ್ತಾ ಪೆದ್ದು ಪೆದ್ದಾಗಿ ತೊದಲಿದ ಐಕಿ.

'ಓ ಅದಾ?' ಮತ್ತಷ್ಟು ವಿಸ್ತಾರವಾಗಿ ಹಲ್ಲು ಗಿಂಜುತ್ತಾ ಸಂಭ್ರಮದಿಂದ ವಿವರಿಸಿದ ಚಂಕ್.

'ಅದೆಲ್ಲ ಹೇಗಾಯ್ತು ಅಂತ ಹೇಳ್ತೀನಿ, ಕೇಳು ಅವತ್ತು ರಾತ್ರಿ ನಾವೆಲ್ಲ ಊಟಕ್ಕೆ ಕೂತೆವಾ? ರೋಸಿ ನನ್ನೆದುರಿಗೇ ಕೂತಿದ್ದಳು. ಅವಳ ಮುಗ್ಧ ಮುಖಭಾವ ನನ್ನನ್ನು ತೀವ್ರವಾಗಿ ತಟ್ಟಿತು. ಆ ಗಳಿಗೆಯೇ ತೀರ್ಮಾನಿಸಿಬಿಟ್ಟೆ– 'ಈ ನನ್ನ ಚೆಲುವೆ ಕುಲೀನ ಮನೆತನದ ಹೆಣ್ಣು... ಸುಶೀಲೆ. ಇವಳನ್ನು ನಾನು ನನ್ನ ಪ್ರೇಮದಿಂದಲೇ ಪಡೆದುಕೊಳ್ತೀನಿ. ಈ ಮದ್ದು, ವಶೀಕರಣ... ಇಂಥವೆಲ್ಲ ಈ ಹುಡುಗಿಯ ವಿಷಯದಲ್ಲಿ ತಪ್ಪು ಇಂಥ ತಪ್ಪನ್ನು ನಾನು ಯಾವತ್ತೂ ಮಾಡಲ್ಲ' ಅಂತ.

ಅದರೂ, ನೀನು ಕಾಗದದಲ್ಲಿ ಸುತ್ತಿಕೊಟ್ಟ ಮದ್ದು ನನ್ನ ಜೇಬಲ್ಲೇ ಇತ್ತು. ಆಗ ಇದ್ದಕ್ಕಿದ್ದಂತೆ ನನ್ನ ನೋಟ ಮಿ. ರಿಡಲ್‌ನ ಮೇಲೆ ಬಿತ್ತು. ನನ್ನನ್ನೇ ದುರುಗುಟ್ಟಿ ನೋಡ್ತಾ ಇದ್ದ ಅವನು. ತುಂಬ ನಗು ಬಂದುಬಿಡ್ತಪ್ಪ ನಂಗೆ! 'ಆಹಾ! ಇನ್ಮುಂದೆ ಈ ಬೆಂಕಿನವಾಬ ತನ್ನ ಅಳಿಯನನ್ನು ಅತಿಶಯವಾಗಿ ಪ್ರೀತಿಸಿಬಿಡ್ತಾನೆ...' ಅಂತ. ಸಮಯ ಕಾದು, ನೀನು ಕೊಟ್ಟ ಮದ್ದಿನ ಪುಡೀನ, ಮೆಲ್ಲಗೆ ಅವನ ಕಾಫೀಲಿ ಬೆರೆಸಿಬಿಟ್ಟೆ... ಅಷ್ಟೆ!